781 (1108) ಶ್ರೀ ವಾಟೀಲ್ ಡಿ ಆರ್ (ಗದಗ್) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಈಗಿರುವ ಬರಪೀಡಿತ ತಾಲ್ಲೂಕುಗಳೆಷ್ಟು , (ಜಿಲ್ಲಾವಾರು ವಿವರ ನೀಡುವುದು) ,

ಆ) ಈ ತಾಲ್ಲೂಕುಗಳಲ್ಲಿರುವ ಕೃಷಿ ಕಾರ್ಮಿಕರು ಸಣ್ಣ ಮತ್ತು ಅತಿಸಣ್ಣ ರೈತ ಕುಟುಂಬಗಳೆಷ್ಟು , (ತಾಲ್ಲೂಕುವಾರು ಮಾಹಿತಿ ನೀಡುವುದು) ,

ಇ) ಇವರೆಲ್ಲರಿಗೂ ಉದ್ಯೋಗ ನೀಡಬೇಕಾಗಿರುವುದು ಸರ್ಕಾರದ ಹೊಣೆಯಲ್ಲವೆ ,

ಈ) ಈ ದಿಶೆಯಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು ,

ಉ) ಇದಕ್ಕಾಗಿ ಸರ್ಕಾರ ಇಲ್ಲಿಯವರೆಗೂ ಬಿಡುಗಡೆ ಮಾಡಿದ ಹಣ, ಆಹಾರಧಾನ್ಯ ಎಷ್ಟು , (ತಾಲ್ಲೂಕುವಾರು ವಿವರ ನೀಡುವುದು) ,

ಊ) ಪ್ರತಿ ತಾಲ್ಲೂಕಿನಲ್ಲಿ ಕೃಷಿ ಕಾರ್ಮಿಕರಿಗೆ ವಾರದಲ್ಲಿ ಕನಿಷ್ಠ ಎಷ್ಟು ದಿನಗಳ ಉದ್ಯೋಗ ಒದಗಿಸಲಾಗಿದೆ (ತಾಲ್ಲೂಕುವಾರು ಮಾಹಿತಿ ನೀಡುವುದು) ,

ಋ) ಉದ್ಯೋಗ ಬಯಸುವವರಿಗೆ ವಾರದಲ್ಲಿ ಕನಿಷ್ಠ 5 ದಿನ ಉದ್ಯೋಗ ಒದಗಿಸಲು ಸರ್ಕಾರ ಕ್ರಮ ಕೈಗೊಳ್ಳಲಾಗುವುದೆ ,

ಎ) ಹಾಗಿದ್ದಲ್ಲಿ, ಈ ಕಾರ್ಯಕ್ರಮಕ್ಕೆ ಬೇಕಾಗುವ ಒಟ್ಟು ಹಣವೆಷ್ಟು , ಇದನ್ನು ಯಾವ ರೀತಿ ಸರ್ಕಾರ ಹೊಂದಾಣಿಕೆ ಮಾಡಲಾಗುವುದು ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಅ) ಬರಪೀಡಿತ ತಾಲ್ಲೂಕುಗಳು 128 ವಿವರ ಅನುಬಂಧ–1ರಲ್ಲಿ ನೀಡಿದೆ

ಆ) ರಾಜ್ಯದಲ್ಲಿ 6226942 ಕೃಷಿ ಕಾರ್ಮಿಕರು, 1909203 ಸಣ್ಣ ರೈತರು ಹಾಗೂ 3251928 ಅತಿ ಸಣ್ಣ ರೈತರು ಇದ್ದಾರೆ

ಇ) ಹೌದು

ಈ) ಬರಪೀಡಿತ ತಾಲ್ಲೂಕುಗಳಲ್ಲಿ ಬಡ ಕೃಷಿ ಕಾರ್ಮಿಕರಿಗೆ ಉದ್ಯೋಗ ಒದಗಿಸಲು ಉದ್ಯೋಗ ಸೃಜನೆ ಕಾರ್ಯಕ್ರಮದಡಿಯಲ್ಲಿ ಒಟ್ಟು ರೂ 234 00 ಕೋಟಿ ಅನುದಾನ ಬಿಡುಗಡೆ ಮಾಡಿದೆ ಹಾಗೂ 50 ಮೆ ಟನ್ ಆಹಾರಧಾನ್ಯ ಬಿಡುಗಡೆ ಮಾಡಿದೆ ಹಾಗೂ ಬರಪೀಡಿತ ತಾಲ್ಲೂಕುಗಳಲ್ಲಿ ಕೃಷಿ ಕಾರ್ಮಿಕರಿಗೆ ಹೆಚ್ಚು ಉದ್ಯೋಗ ಅವಕಾಶ ಇರುವಂತಹ ಕಾಮಗಾರಿಗಳನ್ನು ಕೈಕೊಳ್ಳಲು ಕ್ರಮ ತೆಗೆದುಕೊಂಡಿದೆ ಹಾಗೂ ಯಾವುದೇ ರೀತಿಯ ಯಂತ್ರಗಳನ್ನು ಉಪಯೋಗಿಸಬಾರದು ಎಂದು ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ ಪರಿಹಾರ ಕಾಮಗಾರಿಗಳನ್ನು ಗುತ್ತಿಗೆದಾರರಿಂದ ಮಾಡಿಸದೇ ಇಲಾಖಾ ವತಿಯಿಂದ ಮಾಡಿಸುವಂತೆ ಸೂಚನೆ ನೀಡಲಾಗಿದೆ

ಊ) ಉದ್ಯೋಗ ಒದಗಿಸಲು ಉದ್ಯೋಗ ಸೃಜನೆ ಕಾರ್ಯಕ್ರಮಡಿಯಲ್ಲಿ ಒಟ್ಟು ರೂ 234 00 ಕೋಟಿ ಅನುದಾನ ಹಾಗೂ 50000 ಮೆ ಟನ್ ಆಹಾರಧಾನ್ಯ ಬಿಡುಗಡೆ ಮಾಡಲಾಗಿದೆ

ಋ) ಪ್ರತಿ ಕುಟುಂಬದಲ್ಲಿ ಒಬ್ಬರು ಸದಸ್ಯರಿಗೆ ಕನಿಷ್ಠ 15 ದಿವಸ ಉದ್ಯೋಗ ಒದಗಿಸಲು ಅವಕಾಶವಿದ್ದು, ಅದರಂತೆ ಉದ್ಯೋಗ ಬಯಸುವವರಿಗೆ ಉದ್ಯೋಗ ಒದಗಿಸಲಾಗುತ್ತಿದೆ

ಋ) "ಊ"ನಲ್ಲಿ ಉತ್ತರಿಸಿದೆ

ಎ) 6226942 ಕೃಷಿ ಕಾರ್ಮಿಕರಿಗೆ ಉದ್ಯೋಗ ಒದಗಿಸಲು ಉದ್ದೇಶಿಸಲಾಗಿದೆ ಬೇಡಿಕೆಯಂತೆ ಹಣ ಬಿಡುಗಡೆ ಮಾಡಲಾಗುತ್ತಿದೆ

ಬರಪೀಡಿತವೆಂದು ಘೋಷಿಸಿರುವ ತಾಲ್ಲೂಕುಗಳ ಹೆಸರು

ಅನುಬಂಧ–1

ಕ್ರಮ ಸಂಖ್ಯೆ	ಜಿಲ್ಲೆ	ತಾಲ್ಲೂಕು
1	ಬೆಂಗಳೂರು (ನಗರ)	1) ಆನೇಕಲ್
		2) ಬೆಂಗಳೂರು (ಉತ್ತರ)
		3) ಬೆಂಗಳೂರು (ದಕ್ಷಿಣ)
2	ಬೆಂಗಳೂರು ಗ್ರಾಮಾಂತರ	4) ದೇವನಹಳ್ಳಿ
		5) ದೊಡ್ಡಬಳ್ಳಾಪುರ
		6) ಕನಕಪುರ
		7) ಮಾಗಡಿ
		8) ರಾಮನಗರ
		9) ಚನ್ನಪಟ್ಟಣ
		10) ಹೊಸಕೋಟೆ
		11) ನೆಲಮಂಗಲ
3	ಕೋಲಾರ	12) ಬಂಗಾರಪೇಟೆ
		13) ಚಿಕ್ಕಬಳ್ಳಾಪುರ
		14) ಚಿಂತಾಮಣಿ
		15) ಗೌರಿಬಿದನೂರು
		16) ಕೋಲಾರ
		17) ಮಾಲೂರು
		18) ಮುಳಬಾಗಿಲು
		19) ಶಿಡ್ಲಘಟ್ಟ

		20) ಶ್ರೀನಿವಾಸಮರ
		21) ಬಾಗೇಪಲ್ಲಿ
		22) ಗುಡಿಬಂಡೆ
4	ತುಮಕೂರು	23) ಚಿಕ್ಕನಾಯಕನಹಳ್ಳಿ
		24) ಕೊರಟಗೆರೆ
		25) ಕುಣಿಗಲ್
		26) ಮಧುಗಿರಿ
		27) ಶಿರಾ
		28) ತಿಪಟೂರು
		29) ತುರುವೇಕೆರೆ
		30) ಪಾವಗಡ
		31) ತುಮಕೂರು
		32) ಗುಬ್ಬಿ
5	ಚಿತ್ರದುರ್ಗ	33) ಚಳ್ಳಕೆರೆ
		34) ಹಿರಿಯೂರು
		35) ಹೊಸದುರ್ಗ
		36) ಮೊಳಕಾಲ್ಮೂರು
		37) ಹೊಳಲ್ಕೆರೆ
		38) ಚಿತ್ರದುರ್ಗ
6	ದಾವಣಗೆರೆ	39) ಜಗಳೂರು
		40) ಚನ್ನಗಿರಿ
		41) ದಾವಣಗೆರೆ
		42) ಹರಪನಹಳ್ಳಿ
		43) ಹೊನ್ನಾಳಿ
		44) ಹರಿಹರ
7	ಚಾಮರಾಜನಗರ	45) ಚಾಮರಾಜನಗರ
		46) ಗುಂಡ್ಲುಪೇಟೆ
		47) ಕೊಳ್ಳೇಗಾಲ
		48) ಯಳಂದೂರು
8	ಮೈಸೂರು	49) ಹೆಚ್ ಡಿ ಕೋಟೆ
		50) ಕೃಷ್ಣರಾಜನಗರ
		51) ಮೈಸೂರು
		52) ಟಿ ನರಸೀಪುರ

		53) ನಂಜನಗೂಡು
		54) ಹುಣಸೂರು
		55) ಪಿರಿಯಾಪಟ್ಟಣ
9	ಮಂಡ್ಯ	56) ಕೃಷ್ಣರಾಜಪೇಟೆ
		57) ಮದ್ದೂರು
		58) ಮಳವಳ್ಳಿ
		59) ಮಂಡ್ಯ
		60) ನಾಗಮಂಗಲ
		61) ಪಾಂಡವಪುರ
		62) ಶ್ರೀರಂಗಪಟ್ಟಣ
10	ಬಳ್ಳಾರಿ	63) ಬಳ್ಳಾರಿ
		64) ಹಡಗಲಿ
		65) ಹೊಸಪೇಟೆ
		66) ಹೆಚ್ ಬಿ ಹಳ್ಳಿ
		67) ಕೂಡ್ಲಿಗಿ
		68) ಸಂಡೂರು
		69) ಸಿರಗುಪ್ಪ
11	ಕೊಪ್ಪಳ	70) ಗಂಗಾವತಿ
		71) ಕೊಪ್ಪಳ
		72) ಕುಷ್ಟಗಿ
		73) ಯಲಬುರ್ಗ
12	ರಾಯಚೂರು	74) ದೇವದುರ್ಗ
		75) ಲಿಂಗಸಗೂರು
		76) ಮಾನ್ವಿ
		77) ಸಿಂಧನೂರು
		78) ರಾಯಚೂರು
13	ಗುಲ್ಬರ್ಗ	79) ಅಫಜಲಪುರ
		80) ಶೋರಾಪುರ
		81) ಆಳಂದ
		82) ಚಿಂಚೋಳಿ
		83) ಚಿತ್ತಾಪುರ
		84) ಗುಲ್ಬರ್ಗ

85) ಜೇವರ್ಗಿ
86) ಸೇಡಂ
87) ಶಹಾಪುರ
88) ಯಾದಗಿರಿ

---

782 (1001) ಶ್ರೀ ಪಾಟೀಲ್ ಎಂ ವೈ (ಅಫ್ಜಲ್‌ಪುರ್) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರೈತನಿಗೆ ಕೃಷಿ ಮಾಡಲು ಜಾನುವಾರುಗಳು ಅತಿ ಮುಖ್ಯವಾಗಿರುವುದು ಸರ್ಕಾರದ ಗಮನದಲ್ಲಿದೆಯೇ ,

ಆ) ಪ್ರಕೃತಿ ವಿಕೋಪ ಹಾಗೂ ಸಿಡಿಲು ಬಡಿದು ಜಾನುವಾರುಗಳು ಸತ್ತರೆ ಸಿ ಆರ್ ಎಫ್ ಮುಖಾಂತರ ಪರಿಹಾರ ನೀಡುವ ಯೋಜನೆ ಜಾರಿಯಲ್ಲಿದೆಯೇ,

ಇ) ಹಾಗಿಲ್ಲದಿದ್ದಲ್ಲಿ, ಅದನ್ನು ಸ್ಥಗಿತಗೊಳಿಸದ್ದಕ್ಕೆ ಕಾರಣಗಳೇನು ,

ಈ) ಕೇಂದ್ರ ಸರ್ಕಾರ ಸ್ಥಗಿತಗೊಳಿಸಿದರೆ ರಾಜ್ಯ ಸರ್ಕಾರ ಈ ಪರಿಹಾರ ಕೊಡುವ ಯೋಜನೆಯನ್ನು ರೂಪಿಸಿದೆಯೇ ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಅ) ಹೌದು

ಆ) ಇಲ್ಲ

ಇ) ಮೊದಲಿನಿಂದಲೂ ಈ ಯೋಜನೆ ಜಾರಿಯಲ್ಲಿರುವುದಿಲ್ಲ

ಈ) ಇಲ್ಲ

783 (1002) ಶ್ರೀ ಪಾಟೀಲ್ ಎಂ ವೈ (ಅಫ್ಜಲಪುರ) ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಅಫಜಲಪೂರ ನಗರದಲ್ಲಿರುವ ಕಂದಾಯ ಇಲಾಖೆಯ ಕಟ್ಟಡಕ್ಕೆ ಹೊಂದಿಕೊಂಡಂತಿರುವ ನೀರಾವರಿ ಇಲಾಖೆಯವರು ಖಾಸಗಿ ಜಮೀನನ್ನು ವಶಪಡಿಸಿಕೊಂಡ ಜಮೀನಿನ ವಿಸ್ತೀರ್ಣವೆಷ್ಟು ,

ಆ) ಈ ಎಲ್ಲಾ ಜಮೀನು ಸರ್ಕಾರದ ಸ್ವಾಧೀನದಲ್ಲಿದೆಯೇ ,

ಇ) ಈ ಬೆಲೆ ಬಾಳುವ ಜಮೀನು ಒತ್ತುವರಿಯಾಗಿದ್ದು, ಇದನ್ನು ತೆರವುಗೊಳಿಸಲು ಸರ್ಕಾರ ಕೈಗೊಂಡ ಕ್ರಮವೇನು ?

ಶ್ರೀ ಬಿ ಎಸ್ ಯಡಿಯೂರಪ್ಪ (ಉಪ ಮುಖ್ಯ ಮಂತ್ರಿಗಳು ಹಾಗೂ ಸಣ್ಣ ನೀರಾವರಿ ಸಚಿವರು)

ಅ) ಅಫಜಲಪೂರ ನಗರದಲ್ಲಿರುವ ಅಫಜಲಪೂರ ಕೆರೆಯ ಟೇಲ್ ಚಾನಲ್‌ಗಾಗಿ 6 ಎಕರೆ 22 ಗುಂಟೆ ಖಾಸಗಿ ಜಮೀನನ್ನು ಭೂಸ್ವಾದೀನ ಪಡಿಸಿಕೊಳ್ಳಲಾಗಿದೆ